**ದೋ.ಸಾ. : 44 ಫ್ರಾ.ಸಾ. : 34**

**ದಿನಾಂಕಃ 02-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-**

13. ನನಗೆ ಇಲಾಖಾ ವತಿಯಿಂದ ಕಂಪ್ಯೂಟರ್ ಬಳಸುವ ತರಬೇತಿಯನ್ನು ನೀಡಿರುತ್ತಾರೆ ಹಾಗೂ ನನಗೆ ಈ ಬಗ್ಗೆ ಅನುಭವ ಇರುತ್ತದೆ. ಈ ಪ್ರಕರಣದಲ್ಲಿ ತನಿಖಾಧಿಕಾರಿಯು ಸೂಚಿಸಿದಂತೆ, ಸಾಕ್ಷಿದಾರರ ಹೇಳಿಕೆಗಳನ್ನು, ಆರೋಪಿತರ ಸ್ವ-ಖುಷಿ ಹೇಳಿಕೆಗಳನ್ನು ಹಾಗೂ ಪಂಚನಾಮೆಗಳನ್ನು ಗಣಕೀಕರಿಸುವ ಬಗ್ಗೆ ಮತ್ತು ದಿ.27-10-2018 ರಂದು ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-32 ರವರ ಮೊಬೈಲಿನಲ್ಲಿದ್ದ ಧ್ವನಿ ಸಂಭಾಷಣೆಯನ್ನು ಸಿ.ಡಿ. ಗೆ ಭರಣ ಮಾಡಿದ ಬಗ್ಗೆ ತನಿಖಾಧಿಕಾರಿಗಳಿಗೆ 65-ಬಿ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ 65-ಬಿ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-99 ಎಂದು, ಸಾಕ್ಷಿಯ ಸಹಿಯನ್ನು ನಿಪಿ-99(ಎ) ಎಂದು ಗುರುತಿಸಲಾಯಿತು. ಆರೋಪಿತರು ನೀಡಿದ ಸ್ವ-ಖುಷಿ ಹೇಳಿಕೆಗಳ ಮೇರೆಗೆ, 1 ನೇ ಆರೋಪಿ ಮತ್ತು ಮೃತ ಪ್ರೇಮ್ ಕುಮಾರನ ನಡುವೆ ವ್ಯವಹಾರದ ಸಂಬಂಧ ವೈಷಮ್ಯವಿದ್ದು, ಆತನಿಂದ 1 ನೇ ಆರೋಪಿಗೆ ವ್ಯವಹಾರದಲ್ಲಿ ತೊಂದರೆಯಾಗುತ್ತಿದ್ದ ಕಾರಣ, ಪ್ರೇಮ್ ಕುಮಾರ ನನ್ನು ಕೊಲೆ ಮಾಡಲು 1 ನೇ ಆರೋಪಿಯು 2 ನೇ ಆರೋಪಿಯೊಂದಿಗೆ ಸಂಚು ರೂಪಿಸಿ, ಪ್ರೇಮ್ ಕುಮಾರನನ್ನು ಕೊಲೆ ಮಾಡಲು ತಿಳಿಸಿದಂತೆ, 2 ನೇ ಆರೋಪಿಯು ಪ್ರೇಮ್ ಕುಮಾರನನ್ನು ಕಾರವರದಿಂದ ಉಳವಿಯ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಅಲ್ಲಿ 2 ಮತ್ತು 3 ನೇ ಆರೋಪಿತರು ಈ ಮೊದಲೇ ನಿರ್ಧರಿಸಿದಂತೆ, ಪ್ರೇಮ್ ಕುಮಾರನ ಕಣ್ಣಿಗೆ ಬಟ್ಟೆ ಕಟ್ಟಿ, ಕತ್ತಿಗಳಿಂದ ಆತನ ಮೇಲೆ ಮಾರಣಾಂತಿಕವಾಗಿ ಹಲ್ಲೆ ಮಾಡಿ, ಕೊಲೆ ಮಾಡಿ ಶವವನ್ನು ಅಲ್ಲಿಯೇ ಬಿಸಾಡಿ ನಂತರ ಮೃತನ ಮೈಮೇಲಿದ್ದ ಬಟ್ಟೆ, ಆತನ ಶೂ, ಕಣ್ಣಿಗೆ ಕಟ್ಟಿದ್ದ ಬಟ್ಟೆ, ಕೃತ್ಯಕ್ಕೆ ಬಳಸಿದ ಕತ್ತಿಗಳನ್ನು ಹಾಗೂ 2 ನೇ ಆರೋಪಿಯು ತನ್ನ ಬಟ್ಟೆಗಳನ್ನು ಗಣೇಶ ಗುಡಿಯ ಬಳಿಯ ಸೇತುವೆಯಿಂದ ಕಾಳಿ ನದಿಗೆ ಎಸೆದು, ಸಾಕ್ಷ್ಯ ನಾಶಪಡಿಸಿರುವ ಬಗ್ಗೆ ತಿಳಿದುಬಂದಿರುತ್ತದೆ. ಅದಲ್ಲದೇ, 1 ನೇ ಆರೋಪಿಯು 2 ಮತ್ತು 3 ನೇ ಆರೋಪಿತರ ಮೂಲಕ ಪ್ರೇಮ್ ಕುಮಾರನನ್ನು ಕೊಲೆ ಮಾಡಿಸಿದ ವಿಷಯವು 4 ಮತ್ತು 5 ನೇ ಆರೋಪಿತರಿಗೆ ತಿಳಿದಿದ್ದರೂ ಸಹ, ಅವರು 1 ನೇ

ಆರೋಪಿಯು ತಪ್ಪಿಸಿಕೊಳ್ಳುವಂತೆ ಗೋವಾಗೆ ಬಿಟ್ಟುಬಂದು, ಆರೋಪಿಗೆ ಸಹಾಯ ಮಾಡಿದ ಬಗ್ಗೆ ತಿಳಿದುಬಂದಿರುತ್ತದೆ. ಈಗ ನ್ಯಾಯಾಲಯದ ಮುಂದಿರುವ 1, 2, 4 ಮತ್ತು 5 ಆರೋಪಿತರನ್ನು ಮತ್ತು ವಿ.ಸಿ.ಯಲ್ಲಿ ಕಾಣುತ್ತಿರುವ 3 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ತನಿಖೆಗೆ ಸಹಕರಿಸಿದ ಬಗ್ಗೆ ನಾನು ತನಿಖಾಧಿಕಾರಿಗೆ ಹೇಳಿಕೆ ಹಾಗೂ ಮರುಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

14. ನಿಪಿ–99 65–ಬಿ ಪ್ರಮಾಣ ಪತ್ರವನ್ನು ನಾನು ತನಿಖಾಧಿಕಾರಿಗೆ ದಿ.31–10–2018 ರಂದು ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರವು ನಮ್ಮ ಠಾಣೆಯ ಕಡತದಲ್ಲಿತ್ತು. ನಿಪಿ–99 ಪ್ರಮಾಣ ಪತ್ರವನ್ನು ನಾನು ಈ ದಿನ ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ಈ ಪ್ರಕರಣದ ತನಿಖಾಧಿಕಾರಿಯ ಅನುಮತಿಯನ್ನು ನಾನು ಈ ದಿನ ಪಡೆದಿರುವುದಿಲ್ಲ, ಸಾಕ್ಷಿ ಮುಂದುವರಿದು, ಕಾರವಾರ ನಗರ ಠಾಣೆಯ ಠಾಣಾಧಿಕಾರಿಯ ಸಹಿಯನ್ನು ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ–99 65–ಬಿ ಪ್ರಮಾಣ ಪತ್ರವನ್ನು ಖಾನಾಪುರದಲ್ಲಿ ತಯಾರು ಮಾಡಿರುತ್ತೇನೆ ಹಾಗೂ ಅದರ ದಿನಾಂಕ 31–10–2018 ಆಗಿರುತ್ತದೆ. ದಿ.31–10–2018 ರಂದು ನಾನು ಖಾನಾಪುರಕ್ಕೆ ಹೋಗಿರುವುದಿಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಸಲ್ಲಿಸಿರುವ ನಿಪಿ–99 65–ಬಿ ಪ್ರಮಾಣ ಪತ್ರವನ್ನು ತನಿಖಾಧಿಕಾರಿಯು ಚಾರ್ಜ್ ಶೀಟ್ ನೊಂದಿಗೆ ಸಲ್ಲಿಸಿರುವುದಿಲ್ಲ. ಅದೇ ರೀತಿ, ತನಿಖಾಧಿಕಾರಿಯೂ ಸಹ ಸದರಿ ಪ್ರಮಾಣ ಪತ್ರವನ್ನು ಚಾರ್ಜ್ ಶೀಟ್ ನೊಂದಿಗೆ ಸಲ್ಲಿಸಿರುವುದಿಲ್ಲ ಎಂದು ಹೇಳಿಲ್ಲ. ನಿಪಿ–99 65–ಬಿ ಪ್ರಮಾಣ ಪತ್ರವನ್ನು ನಾನು ತನಿಖಾಧಿಕಾರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಕೊಟ್ಟಿಲ್ಲ ಎಂದು ತಿಳಿದುಬಂದು, ನಾನು ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–99 65–ಬಿ ಪ್ರಮಾಣ ಪತ್ರದಲ್ಲಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

15. ದಿ.22–10–2018 ಕ್ಕಿಂತ ಮೊದಲು 2 ನೇ ಆರೋಪಿಯನ್ನು ಪತ್ತೆ ಹಚ್ಚಲು ಪ್ರಯತ್ನ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ದಿ.22–10–2018 ರ ಮೊದಲು 2 ನೇ ಆರೋಪಿಯ ಸಿ.ಡಿ.ಆರ್.ನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ಆದರೆ, ಪಿ.ಎಸ್.ಐ. ನವೀನ್ ನಾಯ್ಕ ಹಾಗೂ ತನಿಖಾಧಿಕಾರಿಯವರು ಪರಿಶೀಲಿಸಿರುತ್ತಾರೆ ಹಾಗೂ ಆ ವಿಷಯವನ್ನು ನಾನು ಕೇಳಿ

ತಿಳಿದುಕೊಂಡಿರುತ್ತೇನೆ. ದಿ.17–10–2018 ರಂದು 2 ನೇ ಆರೋಪಿಯ ಸಿ.ಡಿ.ಆರ್. ಲೊಕೇಶನ್ ಸತಾರದಲ್ಲಿ ಇತ್ತು ಎಂದು ನನಗೆ ತಿಳಿದುಬಂದಿರುತ್ತದೆ. ನಾನು ಸತಾರಕ್ಕೆ ಎಂದಿಗೂ ಹೋಗಿರುವುದಿಲ್ಲ. ಆದರೆ, ಅಲ್ಲಿಗೆ ಯಾರು ಹೋಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

16. ದಿ.22–10–2018 ರಂದು ಆರೋಪಿತರ ಪತ್ತೆಗೆ ಪಿ.ಎಸ್.ಐ. ನವೀನ್ ನಾಯ್ಕ ರವರೊಂದಿಗೆ ನಾನು ಹೋಗಿದ್ದೆ. ಆ ದಿನ ಸಂಜೆ 5.30 ಗಂಟೆಗೆ ನಾವು ಪೊಲೀಸ್ ಠಾಣೆ ಬಿಟ್ಟು ರಾತ್ರಿ 9.00 ಗಂಟೆಗೆ ದಾಂಡೇಲಿ ತಲುಪಿರುತ್ತೇವೆ. ಅಲ್ಲಿ 2 ನೇ ಆರೋಪಿಯು ತನ್ನ ಮನೆಯಲ್ಲಿರುವ ಬಗ್ಗೆ ಹುಡುಕಾಟ ಮಾಡಿರುವುದಿಲ್ಲ. 2 ನೇ ಆರೋಪಿಯ ಮನೆಯಿಂದ 200 ಮೀ. ದೂರದಲ್ಲಿರುವ ಮಸೀದಿಯ ಬಳಿ ಆರೋಪಿಗಾಗಿ ಕಾಯುತ್ತಿದ್ದೆವು. ಸದರಿ ಮಸೀದಿಯಿಂದ 2 ನೇ ಆರೋಪಿಯ ಮನೆ ಕಾಣುವುದಿಲ್ಲ. 2 ನೇ ಆರೋಪಿಯ ಬರುವಿಕೆಯ ಬಗ್ಗೆ ನಮ್ಮ ಪಿ.ಎಸ್.ಐ. ರವರಿಗೆ ಮೊದಲೇ ಮಾಹಿತಿ ಇದ್ದುದರಿಂದ, ಆತ ಬರುವ ಮುಕ್ಕಾಲು ಗಂಟೆ ಮೊದಲು ನಾವು 2 ನೇ ಆರೋಪಿಯ ಮನೆಯಿಂದ ಸ್ವಲ್ಪ ದೂರದಲ್ಲಿ ನಿಂತುಕೊಂಡಿದ್ದೆವು. 2 ನೇ ಆರೋಪಿಯನ್ನು ಆತನ ಮನೆಯ ಬಳಿಯೇ ವಶಕ್ಕೆ ಪಡೆದುಕೊಂಡಿದ್ದು, ಆತನ ಮನೆಯವರಿಗೆ ನಾವು ವಿಷಯವನ್ನು ನಾವು ತಿಳಿಸಿರುವುದಿಲ್ಲ ಹಾಗೂ ಅವರ ಮನೆಯಲ್ಲಿ ಯಾರ್ಯಾರು ಇರುತ್ತಾರೆ ಎಂದೂ ಸಹ ನಮಗೆ ಗೊತ್ತಿಲ್ಲ.

17. ಆರೋಪಿಯನ್ನು ವಶಕ್ಕೆ ಪಡೆದು ಬೆಳಿಗ್ಗೆ 5.30 ಗಂಟೆಗೆ ಠಾಣೆಗೆ ಬಂದ ನಂತರ ನಾವು ಠಾಣೆಯಲ್ಲಿಯೇ ಇದ್ದೆವು. ನಾವು ದಾಂಡೇಲಿಗೆ ಹೋಗಿಲ್ಲ, 2 ನೇ ಆರೋಪಿಯನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾವೇ 2 ನೇ ಆರೋಪಿಗೆ ಕರೆ ಮಾಡಿ, ಪೊಲೀಸ್ ಠಾಣೆಗೆ ಬರುವಂತೆ ಹೇಳಿ, ಆತ ಬಂದ ನಂತರ ಆತನನ್ನು ವಶಕ್ಕೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದ ನಂತರ, ಪ್ರಾಥಮಿಕ ವಿಚಾರಣೆ ನಡೆಸಿ, ಆತನ ಸ್ವ–ಖುಷಿ ಹೇಳಿಕೆಯನ್ನು ಪಡೆದಾಗ ಬೆಳಿಗ್ಗೆ 8.00 ರಿಂದ 9.00 ಗಂಟೆಯಾಗಿತ್ತು. 3 ನೇ ಆರೋಪಿಯ ಸ್ವ–ಖುಷಿಯ ಹೇಳಿಕೆಯನ್ನು ಬೆಳಿಗ್ಗೆ 9.00 ರಿಂದ 9.30 ಆಗಿತ್ತು. 2 ಮತು 3 ನೇ ಆರೋಪಿತರ ಸ್ವ–ಖುಷಿ ಹೇಳಿಕೆಯನ್ನು ಠಾಣೆಯ ತನಿಖಾ ಸಹಾಯಕರ ಕೊಠಡಿಯಲ್ಲಿ ಪಡೆದುಕೊಂಡಿರುತ್ತೇವೆ. ತನಿಖಾ ಸಹಾಯಕ ಕೊಠಡಿ ಠಾಣೆಯ ಒಳಗೆ ಜನರು ಬಂದು ಕುಳಿತುಕೊಳ್ಳುವ ಜಾಗದ ನಂತರದಲ್ಲಿ ಇರುತ್ತದೆ. ಆರೋಪಿತರ ಸ್ವ–ಖುಷಿ ಹೇಳಿಕೆಯನ್ನು ಪಡೆದುಕೊಳ್ಳುವ ಸಮಯದಲ್ಲಿ ತನಿಖಾ ಸಹಾಯಕರ ಕೊಠಡಿಗೆ ಪೊಲೀಸ್ ಸಿಬ್ಬಂದಿಗೆ ಬಿಟ್ಟು,

ಬೇರೆ ಯಾರಿಗೂ ಪ್ರವೇಶವಿಲ್ಲ ಎಂದರೆ ಸರಿಯಲ್ಲ. ಸ್ವ-ಖುಷಿ ಹೇಳಿಕೆಯನ್ನು ಪಡೆದುಕೊಳ್ಳುವ ಕಾಲಕ್ಕೆ ಮೃತನ ಅಣ್ಣ ಚಾಸಾ-19 ಹಾಗೂ ಮೃತನ ಹೆಂಡತಿಯ ತಮ್ಮ ಚಾಸಾ-20 ರವರು ಹಾಜರಿರುತ್ತಾರೆ. ಈ ಇಬ್ಬರನ್ನು ಬಿಟ್ಟು, ಬೇರೆ ಯಾರೂ ಸಂಬಂಧಿಕರು ಇರಲಿಲ್ಲ. ಪ್ರಾಥಮಿಕ ವಿಚಾರಣೆಯನ್ನೂ ಸಹ ತನಿಖಾ ಸಹಾಯಕರ ಕೊಠಡಿಯಲ್ಲಿ ಮಾಡಿರುತ್ತೇವೆ. 2 ಮತ್ತು 3 ನೇ ಆರೋಪಿತರ ಸ್ವ-ಖುಷಿ ಹೇಳಿಕೆಯನ್ನು ನಾನು ಗಣಕೀಕೃತ ಮಾಡಿರುವುದಿಲ್ಲ. 2 ಮತ್ತು 3 ನೇ ಆರೋಪಿತರು ಯಾವುದೇ ಸ್ವ-ಖುಷಿ ನೀಡದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋದಾಗ, ನಮ್ಮ ಪೊಲೀಸ್ ಸಿಬ್ಬಂದಿಗಳು ಸುಮಾರು 10 ಜನರು, ಡಿ.ಎ.ಆರ್. ಪೊಲೀಸ್ ಸಿಬ್ಬಂದಿಗಳು ಸುಮಾರು 7-8 ಜನರು, ಇಬ್ಬರು ಪಂಚರು, ಇಬ್ಬರು ಮೃತನ ಸಂಬಂಧಿಕರು, ವೈದ್ಯರು ಮತ್ತು ಆರೋಪಿತರು ಇದ್ದರು. ಘಟನಾ ಸ್ಥಳಕ್ಕೂ ಸಹ ಮೃತನ ಸಂಬಂಧಿಕರಾದ ಚಾಸಾ-19 ಮತ್ತು 20 ರವರನ್ನು ಬಿಟ್ಟು ಬೇರೆ ಯಾರೂ ಬಂದಿರುವುದಿಲ್ಲ. ವೈದ್ಯರು ಠಾಣೆಯ ಬಳಿ ಬಂದಿದ್ದರಾ ಅಥವಾ ಇಲ್ಲವಾ ಎಂದು ನನಗೆ ನೆನಪಿಲ್ಲ. ಠಾಣೆಯಿಂದ ನಾವು ಹೊರಡುವಾಗ ಇಲಾಖೆಯ ಒಂದು ಬಸ್ ಮತ್ತು ಒಂದು ಜೀಪಿನಲ್ಲಿ ಹೋಗಿರುತ್ತೇವೆ. ವೈದ್ಯರು ಆ್ಯಂಬುಲೆನ್ಸ್ ನಲ್ಲಿ ಬಂದಿರುತ್ತಾರೆ.

**ನ್ಯಾಯಾಲಯದ ಅವಧಿ ಮುಗಿದ ಕಾರಣ, ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ